ಎರಡನೆ ದಿನ ಸಂಜೆ ಹೊತ್ತು ಸೇಂಟ್ ಲೂಯಿ ವೇದಾಂತ ಸಂಘದ ಸ್ವಾಮಿ ಚೇತನಾನಂದಜಿಯವರು ವರ್ಣ ಪಾರದರ್ಶಕಗಳನ್ನು (Slide Show) ತೆರೆಯ ಮೇಲೆ ಬಿಂಬಿಸಿ ತೋರಿಸಿದರು. ಶ್ರೀರಾಮಕೃಷ್ಣ ಪರಮಹಂಸರ ಅಪರೂಪದ ಛಾಯಾಚಿತ್ರಗಳು, ಅವರ ಜನ್ಮಸ್ಥಳವಾದ ಕಾಮಾರಪುಕುರ ಹಾಗೂ ಸಾಧನಾರಂಗವಾದ ದಕ್ಷಿಣೇಶ್ವರದ ಚಿತ್ರಗಳು ಪ್ರದರ್ಶಿತವಾದವು. ತೆರೆಯ ಮೇಲೆ ಮೂಡಿದ ಒಂದೊಂದು ಚಿತ್ರವನ್ನೂ ಕುರಿತು ಸ್ವಾಮೀಜಿ ನೀಡಿದ ವಿವರಣೆ ತುಂಬಾ ಸ್ವಾರಸ್ಯಪೂರ್ಣವಾಗಿದ್ದು ಎಲ್ಲರ ಮನಸೆಳೆಯಿತು. ಈ ಪ್ರದರ್ಶನ ಬೋಧಪ್ರದವಾಗಿದ್ದಂತೆ ಸಂತೋಷದಾಯಕವೂ ಆಗಿತ್ತು.

ಮೂರನೆ ಹಾಗೂ ಮುಕ್ತಾಯದ ದಿನ ಬೆಳಿಗ್ಗೆ ಪೂಜ್ಯ ಸ್ವಾಮಿ ಗೌತಮಾನಂದರು ತಮ್ಮ ಸಮಾರೋಪ ಭಾಷಣದ ಕಡೆಯಲ್ಲಿ ಐದು ಆಧ್ಯಾತ್ಮ ಸೂತ್ರಗಳನ್ನು ಮುಂದಿಟ್ಟು ಹೊಸ ಸಹಸ್ರಮಾನದಲ್ಲಿ ಇವು ಲೋಕವ್ಯಾಪಕ ಮನ್ನಣೆಯನ್ನು ಪಡೆದಾವೆಂದು ಆಶಿಸಿದರು, ಹಾರೈಸಿದರು.

ಪಂಚಸೂತ್ರಗಳು:

೧. ವೈಚಾರಿಕತೆಯ ಮೇಲ್ಮೆ—ಮೂಢನಂಬಿಕೆಗಳಾಗಲಿ, ಕೆಲವು ಪುಸ್ತಕಗಳಾಗಲಿ, ಸಂಘ ಸಂಸ್ಥೆಗಳಾಗಲಿ ಯಾವುದೇ ಅಡ್ಡಿಯಾಗಿ ಬಂದರೂ ಎದುರಿಸಿ ಸತ್ಯವನ್ನು ಶೋಧಿಸಿ ಕಾಣಲೇಬೇಕೆಂಬ ಛಲ, ಧೈರ್ಯಗಳನ್ನು ವೈಚಾರಿಕತೆ ಒಳಗೊಂಡಿದೆ.

೨. ಎಲ್ಲ ಸಹಮಾನವರಲ್ಲೂ ಇರುವ ದೈವತ್ವವನ್ನು ಕಾಣಬೇಕು ಮತ್ತು ಸಮರ್ಪಣಭಾವದಿಂದ ಜನಾರ್ದನ ಸೇವೆಯೆಂಬಂತೆ ಜನತಾ ಸೇವೆಯನ್ನು ಮಾಡುವುದು.

೩. ದೇವರು ಪ್ರೇಮಸ್ವರೂಪ ಎಂದು ಪೂರ್ಣ ವಿಶ್ವಾಸವಿಟ್ಟು ದೇವರ ಬಗ್ಗೆ ಭಯವಿಲ್ಲದಿರುವುದು.

೪. ಇಂದ್ರಿಯಗಳಿಗೆ ದಾಸರನ್ನಾಗಿ ಮಾಡುವ ಅತಿಯಾದ ಭೋಗಲಾಲಸೆಯನ್ನು ಬಿಡುವುದು.

೫. ಭಗವತ್ಸಾಕ್ಷಾತ್ಕಾರವೊಂದೇ ಜೀವನದ ಪರಮಗುರಿ ಎಂದು ತಿಳಿದು ಬದುಕನ್ನು ಅದರ ಸಾಧನೆಯನ್ನಾಗಿ ಮಾಡಿಕೊಳ್ಳುವುದು.

ಜ್ಞಾನ ಮತ್ತು ಪ್ರೇಮಪೂರ್ಣವಾದ ಸೇವೆ ಇದು ಪರಿಪೂರ್ಣ ಮಾನವನ ಲಕ್ಷಣ ಎಂಬ ಭಾವನೆ ಬೆಳೆಯಬೇಕು ಎಂಬ ಇನ್ನೊಂದು ಮಾತನ್ನೂ ಸ್ವಾಮೀಜಿ ಸೇರಿಸಿದರು.

ಈ ಘಟನೆಯನ್ನು ಕುರಿತ ವಿಸ್ತೃತ ವರದಿ ಅಮೆರಿಕದ ಹಲವು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅನೇಕ ಕ್ರಿಶ್ಚಿಯನ್ನರೂ ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಪ್ರೊಟೆಸ್ಟಂಟ್ ಚರ್ಚ್‌ಗೆ ಸೇರಿದ ಜಾನೆಟ್ ಪೂಲೆ ( Janet Poole), *New York Times* ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳುತ್ತಾರೆ : " ಈ ಅಧಿವೇಶನ ನನ್ನ ಮೇಲೆ ಅದ್ಭುತ ಪರಿಣಾಮ ಉಂಟುಮಾಡಿದೆ. ನಾನು ಇದರ ಬಗ್ಗೆ ಆವಿಷ್ಕರಿಸುತ್ತಿದ್ದೇನೆ. ನಾನು ಏನು ಕಲಿಯುತ್ತಿರುವೆನೋ ಅದರಿಂದ ನಾನು ಮುಗ್ಧಳಾಗಿದ್ದೇನೆ. "

# ಪ್ರಹಸನ ಪ್ರಸಂಗ

ಹಿರಿಯರು, ಕಿರಿಯರು ಮತ್ತು ಮಧ್ಯವಯಸ್ಕರು ಎಲ್ಲ ಸೇರಿ ಒಂದು ಕುಟುಂಬವಾಗುತ್ತದೆ. ಎಲ್ಲರಿಗೂ ಕುಟುಂಬದಲ್ಲಿ ಉಚಿತವಾದ ಸ್ಥಾನವಿರಬೇಕು, ಯಾರನ್ನೂ ಕಡೆಗಣಿಸಬಾರದು. ಯಾರನ್ನಾದರೂ ತಿರಸ್ಕರಿಸುವುದೆಂದರೆ ನಮ್ಮನ್ನೇ ತಿರಸ್ಕರಿಸಿಕೊಂಡಂತೆ, ಏಕೆಂದರೆ ನಾವೆಲ್ಲರೂ ಕಿರಿ, ಮಧ್ಯ ಮತ್ತು ಹಿರಿ ವಯಸ್ಸಿನ ಅವಸ್ಥೆಗಳನ್ನು ಅನುಭವಿಸಿರುತ್ತೇವೆ ಅಥವಾ ಅನುಭವಿಸುತ್ತೇವೆ. ಆದ್ದರಿಂದ ಮನೆಯಲ್ಲಿ ಎಲ್ಲರಿಗೂ ಗೌರವ ಸ್ಥಾನವಿರಬೇಕು.

ಯುವ ದಂಪತಿಗಳಿಬ್ಬರೂ ತಮ್ಮ ಮಕ್ಕಳೊಡನೆ ಆನಂದದಿಂದ ವಾಸಿಸುತ್ತಿದ್ದರು. ಮನೆಯಲ್ಲಿ ಒಬ್ಬನೇ ಮುದುಕನಿದ್ದ—ಗಂಡನ ತಂದೆ. ಅವನಿಗೆ ಸ್ವಲ್ಪ ಅರಳು ಮರಳು. ಅವನಿಂದಾಗಿ ಈ ದಂಪತಿಗಳಿಗೆ ಸ್ವಲ್ಪ ಕಿರುಕುಳ. ತಮ್ಮ ಸುಖ ಜೀವನಕ್ಕೆ ಇವನು ಅಡ್ಡಿಯಾಗಿದ್ದಾನೆ ಎಂಬುದು ಅವರ ಭಾವನೆ. ಇವನನ್ನು ಮನೆಯಿಂದ ದೂರ ಸಾಗಹಾಕುವುದೇ ಒಳ್ಳೆಯದೆಂದು ದಂಪತಿಗಳು ನಿರ್ಣಯಕ್ಕೆ ಬಂದರು. ಆ ಯುವಕ ಮುದುಕನನ್ನು ಒಂದು ದೊಡ್ಡ ಬುಟ್ಟಿಯಲ್ಲಿ ಕೂರಿಸಿ ಅದನ್ನು ತಲೆಯಮೇಲೆ ಹೊತ್ತುಕೊಂಡು ಮನೆಯಿಂದ ಹೊರಟ.

ಅವನು ಹೋಗುವುದನ್ನೇ ಗಮನಿಸುತ್ತಿದ್ದ ಅವನ ಮಗ—ಇನ್ನೂ ಬಾಲಕ—ತಂದೆಯನ್ನು ಕೇಳಿದ: "ಅಪ್ಪ, ಅಜ್ಜನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವೆ?"

"ಅವನ ಪಾಡಿಗೆ ಅವನಿರಲಿ ಎಂದು ಅವನನ್ನು ಪರ್ವತಪ್ರದೇಶದಲ್ಲಿ ಬಿಟ್ಟು ಬರುತ್ತಿದ್ದೇನೆ" ಎಂದು ತಂದೆ ಉತ್ತರಿಸಿದ.

ಬಾಲಕ ಸುಮ್ಮನಾದ. ತಂದೆ ತನ್ನ ಪ್ರಯಾಣ ಮುಂದುವರಿಸಿದ. ಅವನು ನಾಲ್ಕು ಹೆಜ್ಜೆ ಮುಂದುವರಿಯುತ್ತಿದ್ದಂತೆಯೇ ಬಾಲಕ ತಂದೆಯನ್ನು ಕುರಿತು ಹೇಳಿದ : "ಅಪ್ಪ, ಆ ಬುಟ್ಟಿಯನ್ನು ವಾಪಸು ತರುವುದನ್ನು ಮರೆಯಬೇಡ."

ತಂದೆಗೆ ಆಶ್ಚರ್ಯ. ಅವನು ಹಿಂತಿರುಗಿ, " ಏಕೆ "ಎಂದು ಮಗನನ್ನು ಕೇಳಿದ. "ನೋಡು ಅಪ್ಪ, ನೀನು ಮುಂದೆ ಮುದುಕನಾದಾಗ ನಿನ್ನನ್ನೂ ಇದೇ ರೀತಿ ದೂರ ಹೊತ್ತುಕೊಂಡು ಹೋಗಿ ಬಿಡುವುದಕ್ಕೆ ಆ ಬುಟ್ಟಿ ಬೇಕಾಗುತ್ತದೆ."

ಆ ವ್ಯಕ್ತಿಗೆ ಬರೆ ಮುಟ್ಟಿಸಿದಂತಾಯಿತು. ಕೂಡಲೆ ಅವನು ತನ್ನ ತಂದೆಯನ್ನು ಮನೆಗೆ ಕರೆದುಕೊಂಡುಹೋದ ಮತ್ತು ಆದರದಿಂದ ನೋಡಿಕೊಳ್ಳತೊಡಗಿದ.